**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ನ್ಯಾಯಾಲಯ ಧಾರವಾಡ.**

**ಸಿ.ಸಿ.ನಂ.3274/2024**

**ಡಿ.ಡಬ್ಲೂ. 01**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಆಸಿಫ್ ಖಚ್ಚಿ |
| ತಂದೆಯ ಹೆಸರು | ಃ | ನಿಸ್ಸಾರಅಹಮದ |
| ವಯಸ್ಸು | ಃ | 30 ವರ್ಷ |
| ಉದ್ಯೋಗ | ಃ | ವ್ಯಾಪಾರ |
| ವಾಸಸ್ಥಳ | ಃ | ಹುಬ್ಬಳ್ಳಿ. |

**ಸಾಕ್ಷಿಯನ್ನು ದಿಃ *10/02/2026* ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ಶ್ರೀ ಎಸಎಂಕೆ ವಕೀಲರಿಂದ.**

2014-15 ನೇ ಇಸ್ವಿಯಲ್ಲಿ ನಾನು ಬಿಸ್ಮಿಲಾ ಎಂಬ ಹೋಟೇಲ ನಡೆಸುತ್ತಿದ್ದೆ. ಅಂದಾಜು 16-17 ಜನ ನನ್ನ ಹತ್ತಿರ ಕೆಲಸ ಮಾಡುತ್ತಿದ್ದರು. ಸೈಫಅಲಿ ಬಾಂಬೆ ಎನ್ನುವವರು ನನ್ನ ಗೆಳೆಯನಿದ್ದು, ಅವರು ಕೌಂಟರ ಮೇಲೆ ಕ್ಯಾಶಿಯರ ಆಗಿ ಕೂಡುತ್ತಿದ್ದರು. ಸದರಿ ಹೋಟೇಲನ್ನು ಪೂರ್ತಿಯಾಗಿ ಅವರೇ ಮ್ಯಾನೇಜ ಮಾಡುತ್ತಿದ್ದರು. ಸದರಿಯವರು ಹುಬ್ಬಳ್ಳಿಯಲ್ಲಿ ಒಂದು ಕ್ರಿಮಿನಲ ಪ್ರಕರಣದಲ್ಲಿ ಸಿಲಿಕಿದ್ದರು, ಆ ಪ್ರಕರಣದಲ್ಲಿ ನಾನು ಜಾಮೀನುದಾರನಾಗಬೇಕು ಎಂದು ಒತ್ತಾಯಿಸುತ್ತಿದ್ದರು. ಹೋಟೇಲ ನಡೆಸುತ್ತಿರುವಾಗ ನನ್ನ ದ್ವಿಚಕ್ರ ವಾಹನ ನನ್ನ ಖಾತೆಯ ಚೆಕ್ಕು ಬುಕಗಳು ಮತ್ತು ಎಲ್ಲ ವ್ಯವಹಾರಗಳು ಅವರ ಹತ್ತಿರವೇ ಇರುತ್ತಿದ್ದವು. ಹೀಗೆ ಸದರಿ ಕ್ರಿಮಿನಲ್ ಪ್ರಕರಣದಲ್ಲಿ ಅವುಗಳನ್ನು ಉಪಯೋಗಿಸುತಿತದ್ದ, ನನ್ನ ದ್ವಿಚಕ್ರ ವಾಹನವನ್ನು ಸಹ ಸೀಜ ಮಾಡಲಾಗಿತ್ತು. ಸದರಿ ದ್ವಿಚಕ್ರ ವಾಹನದಲ್ಲಿ ನನಗೆ ಸಂಬಂಧಪಟ್ಟ ಹೋಟೇಲನ ಬಾಡಿಗೆ ಕರಾರುಪತ್ರ, ನನ್ನ ಉಳಿತಾಯ ಖಾತೆಯ ಪಾಸ ಪುಸ್ತಕ ಮತ್ತು ಚೆಕ್ಕ ಪುಸ್ತಕ ಇದ್ದವು, ಈ ಕುರಿತು ನಾನು ಬೆಂಡಿಗೇರಿ ಪೊಲೀಸಠಾಣೆಯ ಪಿಎಸ್ಐ ವಾಹೀದ ಖೋತವಾಲ ಎನ್ನುವವರಿಗೆ ವಿಷಯ ತಿಳಿಸಿ ಒಂದು ಅರ್ಜಿಯನ್ನು ಸಹ ಕೊಟ್ಟಿರುತ್ತೇನೆ. ಸದರಿ ವ್ಯಕ್ತಿ ನನ್ನ ಖಾತೆಯ ಚೆಕ್ಕ ಬುಕಗಳನ್ನು ದುರುಪಯೋಗ ಮಾಡಿಕೊಂಡಿ ಫಿರ್ಯಾದಿದಾರರಾದ ಅವರ ಅಣ್ಣನಿಗೆ ಕೊಟ್ಟಿದ್ದು ಇರುತ್ತದೆ. ಪ್ರಸ್ತುತ ಫಿರ್ಯಾದಿದಾರ ಮತ್ತು ನನ್ನ ಜೊತೆಗೆ ವ್ಯವಹಾರವಾಗಿಲ್ಲ. ಸದರಿಯವರಿಗೆ ಎರಡು ತಿಂಗಳ ವೇತನ ಅಂದರೆ 10 ಸಾವಿರ ರೂಪಾಯಿಗಳು ಕೊಡುವುದು ಬಾಕಿ ಇತ್ತು,

ಅವರ ಬೇಡಿಕೆ ಮೇರೆಗೆ ನಾನು 10 ಸಾವಿರಕ್ಕೆ 25 ಸಾವಿರ ರೂಪಾಯಿಗಳನ್ನು ಅವರ ಫೋನಪೇಗೆ ಹಾಕಿದ್ದು ಇರುತ್ತದೆ. ಸದರಿಯವರಿಗೆ ಜಾಮೀನು ಆಗುವುದಿಲ್ಲ ಎಂದು ಹೇಳಿರುವ ಕಾರಣ ಅವರು ನನ್ನ ಹೆಸರನ್ನು ಮತ್ತು ಹೋಟೇಲ ವ್ಯಾಪಾರವನ್ನು ಸಹ ಕೆಡಿಸಿರುತ್ತಾರೆ. ಜಾಮೀನು ಮೇಲೆ ಹೊರಗೆ ಬಂದ ನಂತರ ಸಹ ನನಗೆ ಹಣದ ಬೇಡಿಕೆಯನ್ನು ಪದೇ ಪದೇ ಇಡುತ್ತಿದ್ದು, ನಾನು ಕೊಡುವುದಿಲ್ಲ ಎಂದು ಹೇಳಿರುವ ಕಾರಣ ನಾನು ನಿನ್ನನ್ನು ಹೇಗೆ ಮಾಡುತ್ತೆನೆ ನೋಡು ಎಂದು ಅವರ ಸಹೋದರರಾದ ಫಿರ್ಯಾದಿದಾರರ ಮೂಲಕ ಈ ಪ್ರಕರಣ ಹೂಡಿದ್ದು ಇರುತ್ತದೆ.

ಫಿರ್ಯಾದಿದಾರರಿಂದ ನೋಟೀಸು ಬಂದ ನಂತರ ನಾನು ಅವರನ್ನು ನವನಗರದ ಪಾನ ಅಂಗಡಿಯಲ್ಲಿ ಭೇಟಿ ನೀಡಿ ಅದನ್ನು ಕೇಳಿದಾಗ ಸದರಿಯವರು ನನ್ನ ತಮ್ಮ ಪ್ರಕರಣ ಹೂಡಲು ಹೇಳಿದ್ದರಿಂದ ಹೂಡಿದ್ದೇನೆ, ಎಲ್ಲ ವಿಷಯ ಸಂಗತಿ ಅವನಿಗೆ ಕೇಳು ಎಂದು ಹೇಳಿರುತ್ತಾರೆ. ಮತ್ತೇ ನಾನು ಫಿರ್ಯಾದಿದಾರರ ಅಕ್ಕನ ಹತ್ತಿರ ಸಹ ಹೋಗಿ ವಿಷಯ ತಿಳಿಸಿದ್ದೇನೆ. ಸದರಿಯವರು ನಾನು ನನ್ನ ತಮ್ಮನ ಜೊತೆಗೆ ಮಾತನಾಡುತ್ತೇನೆ ಎಂದು ಹೇಳಿ ಯಾವುದೇ ರೀತಿ ಪರಿಹಾರ ನೀಡಲಿಲ್ಲ. ನಂತರ ನಾನು ಫಿರ್ಯಾದಿದಾರರನ್ನು ಹುಬ್ಬಳ್ಳಿಯ ಸಬಜಲಿನಲಿ ಭೇಟಿಯಾಗಿ ಯಾಕೆ ಈ ರೀತಿ ಮಾಡುತ್ತಿದ್ದಿಯಾ ಎಂದು ಕೇಳಿದಾಗ ನಿನ್ನ ಹತ್ತಿರ ಹೇಗೆ ವಸೂಲಿ ಮಾಡಬೇಕು ಹಾಗೇ ಮಾಡುತ್ತೇನೆ, ಏನಾದರೂ ಮಾಡಿಕೊ ಎಂದು ಧಮಕಿ ಹಾಕಿರುತ್ತಾರೆ. ಮಿಕ್ಕಿದ ಸದರಿ ಸೈಫಅಲಿ ಬಾಂಬೆ ಇವರ ಹತ್ತಿರ ನನ್ನ ಮಿಕ್ಕಿದ 7 ಚೆಕ್ಕು ಇದ್ದವು, ಅದರ ಸಂಬಂಧ ಬ್ಯಾಂಕಿನವರಿಗೆ ತಿಳಿಸಿ, ಅದರ ಕುರಿತು ಕ್ರಮ ಕೈಗೊಳಲು ತಿಳಿಸಿರುತ್ತೇನೆ. ಆದುದರಿಂದ ಈ ಸುಳ್ಳು ಆರೋಪದಿಂದ ಮುಕ್ತ ಮಾಡಿ, ಫಿರ್ಯಾದಿದಾರು ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸಬೇಕಾಗಿ ವಿನಂತಿ.

***ಪಾಟೀ ಸವಾಲು : ಫಿರ್ಯಾದಿದಾರರ ಪರ ವಕೀಲರ ಮನವಿಯ ಮೇರೆಗೆ ಮುಂದೂಡಲಾಯಿತು.***

(ತೆರೆದ ನ್ಯಾ..ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.